

ಮೌನವಾಗಿದ್ದ. ಅವನು ನನಗೆ ತುಂಬಾ ಪ್ರಯತ್ನದಿಂದ ಉಣಿಸುತ್ತಿದ್ದ; ನಾನು ಹಾಸಿಗೆಯ ಮೇಲೆ ಮಲಗಿದಾಗ ತುಂಬಾ ಪ್ರೀತಿಯಿಂದ ರಗ್ಗು ಹೊದೆಸಿದ. ಬೇರೆ ಸಮಯವಾಗಿದ್ದರೆ, ನನಗೂ ಅವನ ಮೇಲೆ ಪ್ರೀತಿ ಉಕ್ಕುತ್ತಿತ್ತು, ಆದರೆ ಆಗ ನಾನು ನನ್ನನ್ನೇ ಸಾಮಾನ್ಯಳಾಗಿ ಮನಗಾಣುತ್ತಿರಲಿಲ್ಲ. ನನ್ನೊಳಗೆ, ನನ್ನ ಮನಸ್ಸಿನಲ್ಲಿ ನಿರಂತರವಾಗಿ ಅದೇನೋ ಘಟಿಸುತ್ತಿತ್ತು, ಮಗ್ಗಲಾಗುತ್ತಿತ್ತು.

ಅಂದು ರಾತ್ರಿ ಮನಸ್ಸು ಬೇಸರಗೊಂಡಿತ್ತು, ಮನಸ್ಸು ಮುರಿದಿತ್ತು, ಮನಸ್ಸಿಗೆ ಆಘಾತವಾಗಿತ್ತು, ಆದರೂ ಗಾಢ ನಿದ್ರೆ ಬಂತು. ಬಹುಶಃ ನನ್ನ ಮಾನಸಿಕ ಉದ್ವೇಗವನ್ನು ಶಮನಗೊಳಿಸುವ ಔಷಧ ಪ್ರಭಾವ ಬೀರಿರಬೇಕು. ಬಹುಶಃ ವೈದ್ಯರು ಹೇಳದೆಕೇಳದೆ ನಾನೆಲ್ಲವನ್ನೂ ಅರ್ಥ ಮಾಡಿಕೊಂಡಿದ್ದೆ, ನನ್ನ ಮನಃಸ್ಥಿತಿಯನ್ನೂ ಅರ್ಥ ಮಾಡಿಕೊಂಡಿದ್ದೆ. ಓರ್ವ ಮಹಿಳೆ ಬೇರೊಬ್ಬ ಮಹಿಳೆಯ ಮನಃಸ್ಥಿತಿಯನ್ನು ಅರ್ಥ ಮಾಡಿಕೊಳ್ಳುತ್ತಾಳೆಂದು ಹೇಳಲಾಗುತ್ತದೆ. ವೈದ್ಯರು ಸಹ ಮಹಿಳೆಯಾಗಿದ್ದರು. ಅವರ ವೈದ್ಯ ಪತಿ ನನ್ನ ಬಗ್ಗೆ ಅವರಿಗೆ ಎಲ್ಲವನ್ನೂ ಹೇಳಿರಬೇಕು. ಮಹಿಳಾ ವೈದ್ಯರು ಏನೆಂದು ಯೋಚಿಸುತ್ತಿರಬೇಕು? ಅವರು ನನ್ನಂಥ ಜೀವನವನ್ನು ಬಯಸುವರೋ ಅಥವಾ ಅವರು ಸಾಗಿಸುತ್ತಿರುವ ಜೀವನದಲ್ಲಿಯೇ ಸಂತುಷ್ಟರೋ? ಅನೇಕ ಬಾರಿ ಬಯಸುವುದರಲ್ಲಿ ಮತ್ತು ಸಂಭವಿಸುವುದರಲ್ಲಿ ಶತಮಾನಗಳ ಹಿನ್ನೆಲೆಯಿರುತ್ತದೆ.

'ನನ್ನ ಬಗ್ಗೆ?' ಈ 'ನನ್ನ ಬಗ್ಗೆ?' ಅಂದರೇನು? ನಾನೇಕೆ ಹೀಗೆ ಯೋಚಿಸುತ್ತೇನೆ? ಬೇರೆಯವರಂತೆ, ನಾನು ಮೊದಲಿನಂತೆ ಜಗತ್ತಿನ ವಿಚಾರಗಳ ಬಗೆ ತಟಸ್ಥಳಾಗಿ ಏಕೆ ಉಳಿಯುವುದಿಲ್ಲ? ಆಗ ನನ್ನ ವಿಚಾರಗಳು ಬದಲಾಗಿರಲಿಲ್ಲ. ನಾನು ಈಗಲೂ ಮಹಿಳಾ ಸ್ವಾತಂತ್ರ್ಯದ ಪರವಾಗಿದ್ದೆ. ನಾನು ಸಿಮೋನ್‌ದ ಬೋವುವಾರ್ ಅವರ ಜೀವನಚರಿತ್ರೆಯನ್ನು ಓದುವಾಗ ಸಾಮಾನ್ಯವಾಗಿ ನನ್ನನ್ನು ಅವರೊಂದಿಗೆ ಹೋಲಿಸಿಕೊಳ್ಳುತ್ತಿದ್ದೆ. ನನ್ನದೇ ಆದ ರೀತಿಯಲ್ಲಿ ನನ್ನ ಜೀವನವನ್ನು ಸಾಗಿಸುವ ಸಾಹಸ ನನ್ನ ಅವಚೇತನದಲ್ಲಿ ಎಲ್ಲೋ ಒಂದು ಕಡೆ ಇದ್ದ ಸಿಮೋನರ ಸ್ವಾತಂತ್ರ್ಯ ಜೀವನದಿಂದ ಲಭಿಸಿತ್ತು. ನನಗೆ ಸಾಮಾಜಿಕ ಸಂಬಂಧಗಳ ಹೆಸರಿನಲ್ಲಿ ಮಹಿಳೆಯರನ್ನು ವಂಚಿಸುವುದು ಸುತರಾಂ ಇಷ್ಟವಿರಲಿಲ್ಲ.

## ಕಾನೂನಿನ ಚಾತುರ್ಯ

ಸುಮಾರು ಒಂದು ವಾರದ ನಂತರ ರಿತಿಕ್ ಹೌಸಿಂಗ್ ಬೋರ್ಡ್ ಕಾಲೊನಿಯಲ್ಲಿ, ಮಾರಾಟಕ್ಕಿದ್ದ ಒಂದು ಮನೆಯನ್ನು ಹುಡುಕಿದ. ರಿತಿಕ್ ನನಗೆ ಆ ಮನೆಯನ್ನು ತೋರಿಸಿದ. ಮನೆ ಇಷ್ಟವಾಗದ ಪ್ರಶ್ನೆಯೇ ಇರಲಿಲ್ಲ.

'ಹೀಗೆ ನಾನು ದಿನಾ ಮನೆ ಬದಲಾಯಿಸಿ ಬದಲಾಯಿಸಿ ಸಾಕಾಗಿ ಹೋಗಿದೆ.'

'ನನಗೂ ಅಷ್ಟೆ, ಆದ್ರೆ ನಾವೇನು ತಾನೇ ಮಾಡೋದಕ್ಕಾಗುತ್ತೆ?' ನನ್ನ ಅಸಹಾಯಕತೆಯನ್ನು ಹೇಳಿದೆ.

'ನಾವು ಒಂದು ಮನೆಯನ್ನು ಖರೀದಿಸಬಹುದು, ಅಷ್ಟು ಹಣ ನಮ್ಮ ಬಳಿ ಇದೆ, ನಾವೇಕೆ ಬೇರೆಯವರ ಕೃಪೆಯನ್ನು ನಿರೀಕ್ಷಿಸಬೇಕು? ಬೇರೆಯವರು ನಮ್ಮ ಸಂಬಂಧವನ್ನು ಸಕಾರಾತ್ಮಕವಾಗಿ ನೋಡುತ್ತಾರೆ, ಅವರು ತಮ್ಮ ಮನೆಯಿಂದ ನಮ್ಮನ್ನು ಹೊರಹಾಕಲ್ಲವೆಂದು ಏಕೆ ಭರವಸೆಯನ್ನಿಟ್ಟುಕೊಳ್ಳಬೇಕು? ಇಂಥ ಅಸಹಾಯಕತೆಯಿಂದ ನಾನು ದಣಿದಿದ್ದೇನೆ', ರಿತಿಕ್ ತನ್ನ ಮನಸ್ಸಿನ ನೋವನ್ನು ನನ್ನೆದುರಿಗಿಟ್ಟ. ಅವನ ಅಭಿಪ್ರಾಯಕ್ಕೆ ನನ್ನ ಒಪ್ಪಿಗೆಯಿತ್ತು. ನಿತ್ಯ ಮನೆ ಬದಲಿಸುವುದು, ಸಾಮಾನುಗಳನ್ನು ಪ್ಯಾಕ್ ಮಾಡುವುದು ಹಾಗೂ ಹೊಸ ಮನೆಯಲ್ಲಿ ಸಾಮಾನುಗಳನ್ನು ಜೋಡಿಸಿಡುವ ಕಷ್ಟದಿಂದ ನಾನು ರೋಸಿಹೋಗಿದ್ದೆ. ಈ ಕೆಲಸದಲ್ಲಿ ರಿತಿಕ್ ನನಗೆ ಅವಶ್ಯಕವಾಗಿ ಸಹಾಯ ಮಾಡುತ್ತಿದ್ದ, ಆದರೂ ನನಗೆ ಬೇಸರವಾಗಿತ್ತು.

'ನೀನು ಸರಿಯಾಗಿಯೇ ಯೋಚಿಸಿದೆ! ನಾವೊಂದು ಮನೆಯನ್ನು ಖರೀದಿಸೋಣ'. ನಾನು ಉತ್ಸಾಹದಿಂದ ಹೇಳಿದೆ. ನನಗೆ ರಿತಿಕ್‌ನ ಈ ಯೋಚನೆ